**Crl.Misc.No.**13/2026 **PW**-1

ದಿನಾಂಕಃ 01.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ. ಎಂ.ಆರ್.ಎಂ. ವಕೀಲರಿಂದ :-**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ನಾನು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ.1 ಎಂದು, ಅಲಭ್ಯ ಪ್ರಮಾಣ ಪತ್ರವನ್ನು ನಿಪಿ 2 ಎಂದು, ಆಧಾರ್ ಕಾರ್ಡ್ ನೋಟರೈಸ್ಡ್ ಪ್ರತಿಗಳನ್ನು ನಿಪಿ 3 ರಿಂದ 6 ಎಂದು, ದಿಃ05.04.2026ರ ವಿಜಯವಾಣಿ ದಿನಪತ್ರಿಕೆಯನ್ನು ನಿಪಿ.7 ಎಂದು, ಸಂಬಂಧಪಟ್ಟ ಜಾಹೀರಾತನ್ನು ನಿಪಿ.7(ಎ) ಎಂದು, ದಿಃ 05.04.2026ರ ಪ್ರಕಾಶಮಾನ ದಿನಪತ್ರಿಕೆಯನ್ನು ನಿಪಿ.8 ಎಂದು, ಸಂಬಂಧಪಟ್ಟ ಜಾಹೀರಾತನ್ನು ನಿಪಿ.8(ಎ) ಎಂದು ಗುರುತಿಸಲಾಯಿತು.

ಎದುರುದಾರರು ಏಕಪಕ್ಷೀಯ ಆದ್ದರಿಂದ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ